# ಪಾರ್ವತಿ: ಹೆಸರಲ್ಲೇ ಎಲ್ಲ ಇದೆ!

ಖಡಾಖಡಿ ಜಗಳಕ್ಕೆ ಹೆಸರುವಾಸಿ ಈ ಪಾರ್ವತಿ. ಮಲಯಾಳಂ, ತಮಿಳು, ಕನ್ನಡ, ಹಿಂದಿ– ಹೀಗೆ ಚತುರ್ಭಾಷಾ ತಾರೆಯಾಗಿರುವ ಪಾರ್ವತಿಯದ್ದು ಡೋಂಟ್‌ಕೇರ್ ಪರ್ಸನಾಲಿಟಿ. ಸದಾ ಹೀರೋಗಳ ಪಾರಮ್ಯ ಮೆರೆಯುವ ಸಿನಿಮಾರಂಗದಲ್ಲಿ ಪಾರ್ವತಿ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿರುವುದೇ ಒಂದು ವಿಸ್ಮಯ. ದೊಡ್ಡ ದೊಡ್ಡ ಹೀರೋಗಳ ಅಭಿಮಾನಿಗಳೆಲ್ಲ ತನ್ನ ಮೇಲೆ ಮುಗಿಬಿದ್ದರೂ ಪಾರ್ವತಿ ಅಲ್ಲಾಡುತ್ತಿಲ್ಲ. ಬೆಟ್ಟದಂತೆ ಗಟ್ಟಿಯಾಗಿ ನಿಂತುಬಿಟ್ಟಿದ್ದಾಳೆ. 'ಸೈಬರ್ ಗೂಂಡಾಗಿರಿಯನ್ನು ಸಹಿಸಲು ಖಂಡಿತಾ ಸಾಧ್ಯವಿಲ್ಲ' ಎಂದು ಗಟ್ಟಿಧ್ವನಿಯಲ್ಲಿ ಹೇಳುತ್ತಿದ್ದಾಳೆ.

ವಿಷಯ ಇಷ್ಟೆ– ಮಲಯಾಳಂನ ಸೂಪರ್‌ಸ್ಟಾರ್ ಮಮ್ಮುಟ್ಟಿ ನಟಿಸಿದ 'ಕಸಬ' ಎನ್ನುವ ಚಿತ್ರದಲ್ಲಿ ಸ್ತ್ರೀವಿರೋಧಿ ಡೈಲಾಗ್‌ಗಳಿವೆ ಎಂದು ಪಾರ್ವತಿ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಳು. ತಕ್ಷಣ ಮಮ್ಮುಟ್ಟಿ ಅಭಿಮಾನಿಗಳು ಈಕೆಯ ಮೇಲೆ ಮುಗಿಬಿದ್ದಿದ್ದಾರೆ. ಆದರೆ ಪಾರ್ವತಿ ತನ್ನ ನಿಲುವಿಗೇ ಗಟ್ಟಿಯಾಗಿ ಅಂಟಿಕೊಂಡಳು. ಕೆಲವರು ಕೊಲೆ ಬೆದರಿಕೆ ಒಡ್ಡಿದರು. ಪಾರ್ವತಿ ಸೈಬರ್ ಪೊಲೀಸ್ ಠಾಣೆಗೆ ದೂರು ಕೊಟ್ಟಳು. ಪೊಲೀಸರು ಒಂದಿಬ್ಬರನ್ನು ಬಂಧಿಸಿದ್ದೂ ಆಗಿದೆ. ಇದೀಗ ಇದೊಂದು ಭಾರೀ ಚರ್ಚೆಯ ವಿಷಯವಾಗಿದ್ದು, ಮಲಯಾಳಂ ಚಿತ್ರರಂಗ ಎರಡು ಬಣವಾಗಿ ಪಾರ್ವತಿಯ ಪರ–ವಿರೋಧ ನಿಂತಿದೆ. ರಾಜಕಾರಣಿ ಶಶಿ ತರೂರ್ ಬಹಿರಂಗವಾಗಿ ಪಾರ್ವತಿಗೆ ಬೆಂಬಲ ಘೋಷಿಸಿದ್ದಾರೆ.

ಪಾರ್ವತಿಗೆ ವಿವಾದಗಳು ಹೊಸದಲ್ಲ. ಈ ಹಿಂದೆಯೂ ಹೀಗೆಯೇ ಸೈಬರ್ ಗೂಂಡಾಗಿರಿಯ ವಿರುದ್ಧ ಆಕೆ ಸಿಡುಕಿದ್ದುಂಟು. ತನ್ನ ಯಶಸ್ವಿ ಚಿತ್ರ 'ಇನ್ನು ನಿಂಡೆ ಮೊಯ್ದಿನ್' ಅನ್ನು ಥಿಯೇಟರ್‌ನಲ್ಲಿ ನೋಡುತ್ತಿದ್ದ ಫೋಟೋವೊಂದನ್ನು ಇನ್‌ಸ್ಟಾಗ್ರಾಮ್‌ಗೆ ಅಪ್‌ಲೋಡ್ ಮಾಡಿದಾಗ 16ರ ಯುವಕನೊಬ್ಬ ಕೆಟ್ಟದಾಗಿ ಕಾಮೆಂಟು ಮಾಡಿದ್ದ. ತಕ್ಷಣ ಆತನನ್ನು ತರಾಟೆಗೆ ತೆಗೆದುಕೊಂಡ ಪಾರ್ವತಿ, ಅದರ ಸ್ಕ್ರೀನ್‌ಶಾಟ್ ತೆಗೆದು ಫೇಸ್‌ಬುಕ್‌ನಲ್ಲಿ ವಿವರಗಳನ್ನು ಹಂಚಿಕೊಂಡಿದ್ದಳು. ಆನ್‌ಲೈನ್‌ನಲ್ಲಿ ಆಕೆಗೆ ಬೆಂಬಲದ ಮಹಾಪೂರವೇ ಹರಿದುಬಂದಿತ್ತು.

ಇದಕ್ಕೂ ಮುನ್ನ ತನ್ನ 'ಸರ್‌ನೇಮ್' ಬಗ್ಗೆ ಪಾರ್ವತಿ ಹೇಳಿಕೊಂಡದ್ದೂ ಪರ– ವಿರೋಧ ಚರ್ಚೆಗೆ ಕಾರಣವಾಗಿತ್ತು. ಪಾರ್ವತಿಯ ಹೆಸರಿನ ಮುಂದೆ ಪತ್ರಕರ್ತರು ಮೆನನ್ ಎಂದು ಸೇರಿಸಿ ಬರೆದದ್ದನ್ನು ಈಕೆ ವಿರೋಧಿಸಿದ್ದಳು. 'ನನ್ನ ಹೆಸರಿಗೆ ಮೆನನ್ ಸೇರಿಸಬೇಡಿ. ನಾನು ಯಾವುದೇ ಧರ್ಮ, ಜಾತಿಯ ಹೆಸರನ್ನು ಅಂಟಿಸಿಕೊಂಡು ಇರಲು ಬಯಸುವುದಿಲ್ಲ. ನನ್ನನ್ನು ಕೇವಲ ಪಾರ್ವತಿಯಾಗಿ ನೋಡಿ. ನನ್ನ ಅಭಿನಯದ ಬಗ್ಗೆ ಮಾತನಾಡಿ' ಎಂದು ಆಕೆ ಬರೆದುಕೊಂಡದ್ದು ಕೆಲವರಿಗೆ ಇರಿಸು ಮುರಿಸು ಉಂಟು ಮಾಡಿತ್ತು. 'ಈಕೆ ಪ್ರಚಾರಕ್ಕಾಗಿ, ಹೊಸ ಚಿತ್ರ ಬಿಡುಗಡೆಯಾಗುವ ಸಂದರ್ಭದಲ್ಲಿ ಬೇಕೆಂದೇ ಹೀಗೆ ಬರೆದುಕೊಂಡಿದ್ದಾಳೆ' ಎನ್ನುವುದು ಟೀಕಾಕಾರರ ಆಕ್ಷೇಪ.

ಆದರೆ ಪಾರ್ವತಿ ಹೇಳುವುದೇ ಬೇರೆ– 'ನನ್ನ ಬರ್ತ್ ಸರ್ಟಿಫಿಕೇಟ್ ಬಿಟ್ಟರೆ ಬೇರೆ ಎಲ್ಲೂ ಮೆನನ್ ಎನ್ನುವ ಸರ್‌ನೇಮ್ ಇಲ್ಲ. ನನ್ನ ಡಿಎಲ್, ವೋಟರ್ ಐಡಿ, ಪಾಸ್‌ಪೋರ್ಟ್, ಸಿಬಿಎಸ್‌ಸಿ ಸರ್ಟಿಫಿಕೇಟ್ ಎಲ್ಲದರಲ್ಲೂ ಬರೀ ಪಾರ್ವತಿ ಎಂದೇ ಇದೆ. ಬೇಡ ಎಂದರೂ ಮೆನನ್ ಎನ್ನುವ ಹೆಸರನ್ನೇಕೆ ಪತ್ರಕರ್ತರು ಬರೆಯುತ್ತಾರೆ?' ಸಾಮಾನ್ಯವಾಗಿ ಕೆಳಜಾತಿ ಸರ್‌ನೇಮ್‌ಗಳನ್ನು ಹಾಕಿಕೊಳ್ಳದೇ ಇರುವವರು ಮತ್ತು ಹೆಮ್ಮೆಯಿಂದ ಹಾಕಿಕೊಳ್ಳುವವರು ನಮ್ಮ ನಡುವೆ ಸಾಕಷ್ಟು ಜನ ಇದ್ದಾರೆ. ಹಾಗೆಯೇ ಮೇಲ್ಜಾತಿ ಸರ್‌ನೇಮ್‌ಅನ್ನು ಹೆಮ್ಮೆಯಿಂದ ಬಳಸುವವರೂ ಇದ್ದಾರೆ. ಆದರೆ ಪಾರ್ವತಿ ತನ್ನ ಮೇಲ್ಜಾತಿಯ ಸರ್‌ನೇಮ್ ಅನ್ನು ತ್ಯಜಿಸಿದ್ದು ಬಹಳಷ್ಟು ಮಂದಿಗೆ ಸೋಜಿಗದ ಸಂಗತಿ.

ಅಂದ ಹಾಗೆ ಈಕೆಯ ಮೆನನ್ ಸರ್‌ನೇಮ್ ಪತ್ರಿಕೆಗಳಲ್ಲಿ ಮೊದಲು ಬಂದದ್ದೇ ಕನ್ನಡ ಸಿನಿಮಾದಲ್ಲಿ ನಟಿಸಿದಾಗ! ''ಕನ್ನಡ ಸಿನಿಮಾದಲ್ಲಿ ನಟಿಸಿದಾಗ ಬೆಂಗಳೂರಿನ ಪತ್ರಕರ್ತರೊಬ್ಬರು ಸರ್‌ನೇಮ್ ಬಗ್ಗೆ ಒತ್ತಿ ಒತ್ತಿ ಕೇಳಿದ್ದರು. ನನ್ನ ನಿಲುವು ಸ್ಪಷ್ಟ ಪಡಿಸಿದ್ದೆ. ಆದರೆ ಪತ್ರಿಕೆಗಳಲ್ಲಿ ಪಾರ್ವತಿ ಮೆನನ್ ಅಂತಲೇ ಬಂತು. ಈ ಹಿಂದೆ 'ನೋಟ್‌ಬುಕ್' ಚಿತ್ರದಲ್ಲಿ ನಟಿಸಿದ್ದಾಗ ಸಂದರ್ಶನ ಮಾಡಿದ್ದ ಪುಣ್ಯಾತ್ಮನೊಬ್ಬ ಆತನ ಪತ್ರಿಕೆಯಲ್ಲಿ ನನ್ನ ಹೆಸರನ್ನು ಪೂಜಾ ಎಂದು ಬರೆದಿದ್ದ. ಅದು ಆ ಚಿತ್ರದ ಪಾತ್ರದ ಹೆಸರು ಎನ್ನುವುದೂ ಆತನಿಗೆ ಗೊತ್ತಿರಲಿಲ್ಲ'' ಎಂದು ನಗೆಯಾಡಿದ್ದಾಳೆ ಪಾರ್ವತಿ.

2006ರಲ್ಲಿ 'ಔಟ್ ಆಫ್ ಸಿಲೆಬಸ್' ಚಿತ್ರದ ಮೂಲಕ ಮಲಯಾಳಂ ಚಿತ್ರರಂಗಕ್ಕೆ ಕಾಲಿಟ್ಟ ಪಾರ್ವತಿ, ಈಗ ಅತ್ಯಂತ ಬೇಡಿಕೆಯ ನಟಿ. ಅಪ್ಪ– ಅಮ್ಮ ಇಬ್ಬರೂ ವಕೀಲರು. ಬಿಎ ಇಂಗ್ಲಿಷ್ ಲಿಟರೇಚರ್ ಪದವಿ ಬಳಿಕ, ಈಗ ಎಂಎ ಓದುತ್ತಿದ್ದಾಳೆ. ತನ್ನ ಭಾವಪೂರ್ಣ ಮತ್ತು ಸಹಜ ಅಭಿನಯದಿಂದ ರಾಷ್ಟ್ರಪ್ರಶಸ್ತಿ ಸಹಿತ ಹಲವಾರು ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ಪಾರ್ವತಿ, ಸ್ಪಷ್ಟವಾಗಿ ಹೇಳುವುದು– 'ನಿಜಜೀವನದಲ್ಲಿ ನಾನು ನಟನೆ ಮಾಡುವುದಿಲ್ಲ. ನನಗೆ ಅನ್ನಿಸಿದ್ದನ್ನು ಧೈರ್ಯವಾಗಿ ಹೇಳುತ್ತೇನೆ.'

ವರ್ಷದ ಕೊನೆಗೆ ಮಮ್ಮುಟ್ಟಿ ಈ ವಿವಾದದ ಬಗ್ಗೆ ಬಾಯಿಬಿಟ್ಟಿದ್ದಾರೆ. 'ವಿದೇಶ ಪ್ರವಾಸದಲ್ಲಿ ಇದ್ದುದರಿಂದ ಈ ವಿವಾದ ಗಮನಿಸಿಲ್ಲ. ನಾನು ಯಾರಿಗೂ ನನ್ನ ಪರವಾಗಿ ಸ್ಪಷ್ಟನೆ ನೀಡಲು ಅಧಿಕಾರ ಕೊಟ್ಟಿಲ್ಲ. ಇಂತಹದ್ದನ್ನೆಲ್ಲ ನಿರ್ಲಕ್ಷಿಸಿ ಎಂದು ಪಾರ್ವತಿ ಫೋನ್ ಮಾಡಿದಾಗ ಹೇಳಿದ್ದೇನೆ' ಎಂದಿದ್ದಾರೆ ಮಮ್ಮುಟ್ಟಿ. ಬೇರೆ ಭಾಷೆಯ ಚಿತ್ರರಂಗದಲ್ಲಿ ಸೂಪರ್‌ಸ್ಟಾರ್‌ಗಳ ಅಭಿಮಾನಿಗಳನ್ನು ಎದುರುಹಾಕಿಕೊಂಡು ಬದುಕುವುದು ಕಷ್ಟ. ಆದರೆ ಮಲಯಾಳಂನಲ್ಲಿ ಇಂತಹ ಧೈರ್ಯಶಾಲಿ ನಟಿಯರನ್ನು ಬೆಂಬಲಿಸುವವರು ಚಿತ್ರರಂಗದಲ್ಲೇ ಇದ್ದಾರೆ. ಸದ್ಯಕ್ಕಂತೂ ಪಾರ್ವತಿಯ ನಾಗಾಲೋಟ ಮುಂದುವರಿದಿದೆ.



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65